ಶ್ವಾಸ ಸಂಧಿ

ಹರಿಕಥಾಮೃತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮ ಭಗವದ್ಭಕ್ತರಿದನಾದರದಿ ಕೇಳುವುದು

ಭಾರತೀಶನು ಘಳಿಗೆಯೊಳು ಮು
ನ್ನೂರ ಅರವತ್ತು ಸಿರುಜಪಗಳ
ತಾ ರಚಿಸುವನು ಸವಜೀವರೊಳಿದ್ದು ಬೇಸರದೆ
ಕಾರುಣಿಕನವರವರ ಸಾಧನ
ಪೂರೈಸಿ ಭೂ ಸ್ವಗ ನರಕವ
ಸೇರಿಸುವ ಸವಜ್ಞ ಸಕಲೇಷ್ಟಪ್ರದಾಯಕನು ೦೧

ತಾಸಿಗೊಂಭೈನೂರು ಶ್ವಾಸೋ
ಚ್ಛ್ವಾಸಗಳ ನಡೆಸುತಲಿ ಚೇತನ
ರಾಶಿಯೊಳು ಹಗಲಿರುಳು ಜಾಗೃಥನಾಗಿ ನಿತ್ಯದಲಿ
ಈ ಸುಮನಸೊತ್ತಂಸ ಲೇಶಾ
ಯಾಸವಿಲ್ಲದೆ ಪೋಷಿಸುತ ಮೂ
ಲೇಶನಂಘ್ರಿಸರೋಜಮೂಲದಲಿಪ್ಪ ಕಾಣಿಸದೆ ೦೨

ಅರಿವುದೊಂದ್ಯಾಮದೊಳು ಶ್ವಾಸ
ಗಳೆರಡುಸಾವಿರದೇಳುನೂರನು
ಶರಸಹಸ್ರದ ಮೇಲೆ ನಾನೂರಹವು ದ್ವಿತಿಯಕೆ

www.yousigma.com

ಮರಳಿ ಯಾಮತ್ರಯಕೆ ವಸು ಸಾ
ವಿರದ ಮೇಲ್ನೂರೆಣಿಕೆಯಲಿ ಹ
ನ್ನೆರಡು ತಾಸಿಗೆ ಹತ್ತುಸಾವಿರದೆಂಟುನೂರಹವು ೦೩

ಒಂದು ದಿನದೊಳಗನಿಲ ಇಪ್ಪ
ತ್ತೊಂದು ಸಾವಿರದಾರುನೂರು
ಮುಕುಂದುನಾಜ್ಞದಿ ಮಾಡಿ ಮಾಡಿಸಿ ಲೋಕಗಳ ಪೊರೆವ
ನೆಂದು ಪವನನ ಪೊಗಳುತಿರೆ ಎಂ
ದೆಂದು ಮರಿಯದೆ ಈ ಮಹಿಮೆ ಸಂ
ಕ್ರಂದನಾದ್ಯರಿಗುಂಟೆ ನೋಡಲು ಸವಕಾಲದಲಿ ೦೪

ಮೂರುಲಅದ ಮೇಲೆ ವಿಂಶತಿ
ಈರೆರಡುಸಾವಿರವು ಪಅಕೆ
ಆರುಲಅದ ಮೇಲೆ ನಾಲ್ವತ್ತೆಂಟುಸಾವಿರವು
ಮಾರುತನು ಮಾಸಕೆ ಜಪಿಸಿ ಸಂ
ಸಾರ ಸಾಗರದಿಂದ ಸುಜನರ
ಪಾರುಗಾಣಿಸಿ ಸಲಗುವನು ಬಹುಭೋಗಗಳನ್ನಿತ್ತು ೦೫

ಎರಡು ತಿಂಗಳಿಗಹವು ಋಥು
ಭೂಸುರರು ತಿಳಿವದು ಶ್ವಾಸಜಪ ಹ
ನ್ನೆರಡುಲಅದಮೇಲೆ ತೊಂಭತ್ತಾರು ಸಾಹಸ್ರ
ಕರೆಸುವದು ಅಯನಾವ್ಹಯದಲರೆ
ವರುಷ ಮುವತ್ತೆಂಟು ಲಓ

ಪರಿ ತಿಳಿವುದೆಂಭತ್ತೆಂಟುಸಹಸ್ರ ಕೊವಿದರು ೦೬

ವರುಷಕಿಧರಿಮ್ಮ್ಮಡಿ ಜಪಂಗಳ
ಗುರುವಯ ತಾ ಮಾಡಿಮಾಡಿಸಿ
ದುರಿತಗಳ ಪರಿಹರಿಸುವನು ಚಿಂತಿಸುವ ಸಜ್ಜನರ
ಸುರವಿರೋಧಿಗಳೊಳಗೆ ನೆಲೆಸಿ
ದ್ದರವಿದೂರ ತಮೋಧಿಕಾರಿಗ
ಳಿರವರಿತು ಸೋಹಮುಪಾಸನೆ ಮಾಳ್ಪನವರಂತೆ ೦೭

ಇನಿತುಪಾಸನನೆ ಸವಜೀವರೊ
ಳನಿಲದೇವನು ಮಾಡುತಿರೆ ಚಿಂ
ತನೆಯ ಮಾಡದೆ ಕಂಡ ನೀರೊಳು ಮುಳುಗಿ ನಿತ್ಯದಲಿ
ಮನೆಯೊಳಗೆ ಕೃಷ್ಣಾಜಿನಾಧ್ಯ
ಸನದಿ ಕುಳಿತು ವಿಶಿಷ್ತ ಬಹು ಸ
ಜ್ಜನನೆನಿಸಿ ಜಪಮಣಿಗಳೆಣಿಸಿದರೇನು ಬೆಸರದೆ ೦೮

ಓದನೋದಕ ಎರಡು ತೇಜದೊ
ಳೈದುವುವು ಲಯ ತದಭಿಮಾನಿಗ
ಳಾದ ಶಿವಪವನರು ರಮಾಧೀನತ್ವ ಐದುವರು
ಈ ದಿವಿಜರೊದಗೂಡಿ ಶ್ರೀ ಮಧು
ಸೂದನನ ಐದುವಳು ಎಂದರಿ
ದಾದರದಲನ್ನೋದಕವ ಕೊಡುತುಣುತ ಸುಖಿಸುತಿರು ೦೯

ಜಾಲಿತೊಪ್ಪಲಜಾವಿಗಳು ಮೆ
ದ್ದಾಲಯದಿ ಸ್ವೇಚ್ಛಾನುಸಾರದಿ
ಪಾಲ ಗರೆವಂದದಲಿ ಲಮೀರಮಣ ತನ್ನವರ
ಕೀಳುಕಮವ ಸ್ವೀಕರಿಸಿ ತ
ನ್ನಾಲಯದೊಳಿಟ್ಟವರ ಪೊರೆವ
ಕೃಪಾಳು ಕಾಮದ ಕೈರವದಳಶ್ಯಾಮ ಶ್ರೀರಾಮ ೧೦

ಶಶಿ ದಿವಾಕರ ಪಾವಕರೊಳಿಹ
ಅಸಿತ ಸಿತ ಲೋಹಿತಗಳಲಿ ಶಿವ
ಶ್ವಸನ ಭಾಗವಿ ಮೂವರೊಳು ಶ್ರೀಕೃಶ್ಣ ಹಯವದನ
ವಸುಧಿಪಾದನ ಥ್ರಿವೃಥು ಎನಿಸಿ
ವಸುಮತಿಯೊಳನ್ನೋದಕಾನಳ
ಪೆಸರಿನಿಂದಲಿ ಸವಜೀವರ ಸಲಹುವನು ಕರುಣಿ ೧೧

ದೀಪ ಕರದಲಿ ಪಿಡಿದು ಕಾಣದೆ
ಕೂಪದೊಳು ಬಿದ್ದಂತೆ ವೇದ ಮ
ಹೋಪನಿಷದಥಗಳ ನಿತ್ಯದಿ ಪೇಳುವವರೆಲ್ಲ
ಶ್ರೀಪವನಮುಖವಿನುತನಮಲಸು
ರೂಪಗಳ ವ್ಯಾಪಾರ ತಿಳಿಯದೆ
ಪಾಪಮಣ್ಯಕೆ ಜೀವಕಥೃಕಥೃ ಹರಿಯೆಂಬ ೧೨

ಅನಿಲದೇವನು ವಾಙ್ಮನೋಮಯ
ನೆನಿಸಿ ಪಾವಕ ವರುಣ ಸಂಕ್ರಂ

ದನಮುಖಾದ್ಯರೊಳಿದ್ದು ಭಗವದ್ರೂಪಗುಣಗಳನು
ನೆನೆನೆನೆದು ಉಚ್ಚರಿಸುತಲಿ ನ
ಮ್ಮನು ಸದಾ ಸಂತಯಿಸುವನು ಸ
ನ್ಮುನಿಗಣಾರಾಧಿತಪದಾಂಬುಜ ಗೋಜ ಸುರರಾಜ. ೧೩

ಪಾದವೆನಿಪುವು ವಾಙ್ಮನೋಮಯ
ಪಾದರೂಪದ್ವಯಗದೊಳು ಪ್ರ
ಹ್ಲಾದ ಪೋಷಕ ಸಂಕರುಷಣಾವ್ಹಯದಿ ನೆಲೆಸಿದ್ದು
ವೇದಶಾಸ್ತ್ರ ಪುರಾಣಗಳ ಸಂ
ವಾದರೂಪದಿ ಮನನಗೈವುತ
ಮೋದಮಯ ಸುಖವಿತ್ತು ಸಲುಹುವ ಸವಸಜ್ಜನರ ೧೪

ಗಂಧವಹ ದಶದಿಶಗಳೊಳಗರ
ವಿಂದ ಸೌರಭ ಪಸರಿಸುತ ಘ್ರಾ
ಣೇಂದ್ರಿಯಗಳಿಗೆ ಸುಖವನೀವುತ ಸಂಚರಿಸುವಂತೆ
ಇಂದಿರೇಶನ ಸುಗುಣಗಳ ದೈ
ನಂದಿನದಿ ತುತಿಸುತನುಮೋದಿಸು
ತಂಧ ಬಧಿರ ಸುಮೂಕನಂತಿರು ಮಂದಜನರೊಡನೆ ೧೫

ಶ್ರೀರಮಣನರಮನೆಯ ಪೂವ
ದ್ವಾರದಲ್ಲಿಹ ಸಮ್ಮ್ಜ್ಯ್ಘ್ಳ್ಯಸೂಯಗ
ಭಾರತೀಪತಿ ಪ್ರಾಣನೊಳಗಿಹ ಲಕುಮಿನಾರಯಣನ
ಸೇರಿ ಮನುಜೋತ್ತಮರು ಸವಶ

ರೀರಗತ ನಾರಾಯಣನ ಅವ
ತಾರಗುಣಗಳ ತುತಿಸುತಲಿ ಮೋದಿಪರು ಮುಕ್ತಿಯಲಿ ೧೬

ಪ್ರಣವಪ್ರತಿಪಾದ್ಯನ ಪುರದ ದ
ಇಣಕವಾಟದಲಿಪ್ಪ ಶಶಿ ರೋ
ಹಿಣಿಗತ ವ್ಯಾನಸ್ಥ ಕೃಥಿಪ್ರಧ್ಯುಮ್ನ ರೂಪವನು
ಗುಣಗಳನು ಸಂತುತಿಸುತಲಿ ಪಿಥೃಗಣ
ಗದಾಧರನತಿವಿಮಲ ಪ
ಟ್ಟಣದೊಳಗೆ ಸ್ವೇಚ್ಛಾನುಸಾರದಿ ಸಂಚರಿಸುತಿಹರು ೧೭

ಅಮಿತವಿಕ್ರಮನಾಲಯದ ಪ
ಶ್ಚಿಮಕವಾಟದಿ ಸತಿಸಹಿತ ಸಂ
ಭ್ರಮದಿ ಭಗವದ್ಗುಣಗಳನೆ ಪೊಗಳುತಲಿ ಮೋದಿಸುವ
ಸುಮನಸಾಸ್ಯನೊಳಿಪ್ಪ ಪಾನಗ
ದಮನ ಸಂಕರುಷಣನ ನಿಜಹೃ
ಕಮಲದೊಳು ಧೇನಿಸುವ ಋಷಿಗಣವೈಧಿ ಸುಖಿಸುವರು ೧೮

ಸ್ವರಮಣನ ಗುಣರೂಪ ಸಪ್ತ
ಸ್ವರಗಳಿಂದಲಿ ಪಾಡುತಿಹ ತುಂ
ಬುರರೆ ಮೊದಲಾದಖಿಳ ಗಂಧವರು ರಮಾಪತಿಯ
ಪುರದ ಉತ್ತರಬಾಗಿಲಾಧಿಪ
ಸುರಪ ಶಚಿಗ ಸಮಾನವಾಯುಗ
ಹರಿನ್ಮಣಿಭ ಶಾಂತಿಪತಿಯನಿರುದ್ಧನೈದುವರು ೧೯

ಷ್ಕರನೆ ಕಡೆಯಾಗಿಪ್ಪಖಿಳ ನಿ
ಜರರು ಊರ್ಧ್ವದ್ವಾರಗತ ಭಾರತಿ ಉದಾನನೊಳು
ಮೆರೆವ ಮಾಯಾ ವಾಸುದೇವನ
ಪರಮಮಂಗಳವಯವಗಳ ಮಂ
ದಿರವನೈದಿ ಸದಾ ಮುಕುಂದನ ನೋಡಿ ಸುಖಿಸುವರು ೨೦

ದ್ವಾರಪಂಚಕಪಾಲಕರೊಳಿಹ
ಭಾರತೀಪ್ರಾಣಾಂತರಾತ್ಮಕ
ಮಾರಮಣನೈರೂಪ ತತ್ತದ್ವಾರದಲಿ ಬಪ್ಪ
ಮೂರೆರಡು ವಿಧ ಮುಕ್ತಿಯೋಗ್ಯರ
ತಾರತಮ್ಯವನರಿತವರ ಕಂ
ಸಾರಿ ಸಂಸಾರಾಬ್ಧಿ ದಾಟಿಸಿ ಮುಕ್ತರನು ಮಾಳ್ಪ ೨೧

ಬೆಳಗಿಧೂಜಿಯು ನೋಳ್ಪರಿಗೆ ಥಳ
ಥಳಿಸುತಲಿ ಕಂಗೊಳಿಸುವಂದದಿ
ತೊಳೆದು ದೇಹವ ನಾಮಮುದ್ರೆಗಳಿಂದಲಂಕರಿಸಿ
ಒಲಿಸಿ ನಿತ್ಯ ಕುತಕಯುಕ್ತಿಗ
ಳಲವಬೋಧರ ಶಾಸ್ತ್ರಮಮವ
ತಿಳಿಯದಿಹ ನರ ಬರಿದೆ ಇದರೊಳು ಶಂಕಿಸಿದರೇನು ೨೨

ಉದಧಿಯೊಳು ಊಮಿಗಳು ತೋಪಂ
ದದಲಿ ಹಂಸೋದ್ಗೀಥ ಹರಿ

ಹಯವದನ ಕೃಷ್ಣಾದ್ಯಮಿಥ ಅವತಾರಗಳು ನಿತ್ಯದಲಿ
ಪದುಮನಾಭನೊಳಿರುತಿಹವು ಸ
ವದ ಸಮಸ್ತ ಪ್ರಾಣಿಗಳ
ಚಿದ್ಪೃಥಯಗಥ ರೂಪಗಳನವ್ಯವಧಾನದಲಿ ಬಿಡದೆ ೨೩

ಶರಧಿಯೊಳು ಮಕರಾದಿ ಜೀವರು
ಇರುಳುಹಗಲೇಕಪ್ರಕಾರದಿ
ಚರಿಸುತನುಮೋದಿಸುತ ಇಪ್ಪಂದದಿ ಜಗತ್ರಯವು
ಇರುತಿಹವು ಜಗದೀಶನುದರದಿ
ಕರೆಸುವುದು ಪ್ರತಿಬಿಂಬನಾಮದಿ
ಧರಿಸಿಹುದು ಹರಿನಾಮರೂಪಂಗಳನು ಅನವರತ ೨೪

ಜನನಿ ಸೌಷ್ಠಪದಾಥಗಳ ಭೋ
ಜನವ ಮಾಡಲು ಗಭಗತ
ಶಿಶುಧಿನಧಿನಧಲಭಿವೃದ್ಧಿಯ್ ಐದುವ ತೆರದಿ ಜೀವರಿಗೆ
ವನಜನಾಭನು ಸವರಸ ಉಂ
ಡುಣಿಸಿ ಸಂರಕ್ಷಿಸುವ ಜಾಹ್ನವಿ
ಜನಕ ಜನ್ಮಾದ್ಯಖಿಳದೋಷವಿದೂರ ಗಂಭೀರ. ೨೫

ಆಸೆಗೊಳಗಾದವನು ಜನರಿಗೆ
ದಾಸನೆನಿಸುವನಾಸೆಯನು ನಿಜ
ದಾಸಗೈದಿಹ ಪುಂಸಗೆಲ್ಲರು ದಾಸರೆನಿಸುವರು
ಶ್ರೀಶನಂಘ್ರಿಸರೋಜಯುಗಳ ನಿ

www.yousigma.com

ರಾಶೆಯಿಂದಲಿ ಭಜಿಸೆ ಒಲಿದು ರ
ಮಾಸಹಿತ ತನ್ನನೆ ಕೊಡುವ ಕರುಣಾಸಮುದ್ರ ಹರಿ ೨೬

ದ್ಯುನದಿಯಾಧ್ಯಂತವನು ಕಾಣದೆ
ಮನುಜ ಏಕತ್ರದಲಿ ತಾ ಮ
ಜ್ಜನವ ಗೈಯೆ ಸಮಸ್ತದೋಷ ದಿ ವಿಮುಕ್ತನಹ ತೆರದಿ
ಅನಘನಂಅಲಾನಂತಾನಂತ ಸು
ಗುಣಗಳೊಳಗೊಂದೇ ಗುಣೋಪಾ
ಸನವಗೈವ ಮಹಾತ್ಮ ಢನ್ಯಕೃತಾಠನೆನಿಸುವನು ೨೭

ವಾಸುದೇವನು ಕರೆಸುವನು ಕಾ
ಪಾಸನಾಮದಿ ಸಂಕರುಷಣನು
ವಾಸವಾಗಿಹ ತೂಲದೊಳು ತಂತುಗನು ಪ್ರದ್ಯುಮ್ನ
ವಾಸರೂಪನಿರುದ್ಧದೇವನು
ಭೂಷಣನು ತಾನಾಗಿ ತೋಪ ಪ
ರೇಶ ನಾರಾಯಣನು ಸವದ ಮಾನ್ಯಮಾನದನು ೨೮

ಲಲನೆಯಿಂದೊಡಗೂಡಿ ಚೈಲಗ
ಳೊಳಗೆ ಓತಪ್ರೋತರೂಪದಿ
ನೆಲೆಸಿಹನು ಚತುರಾತ್ಮಕ ಜಗನ್ನಾಥವಿಠಲನು
ಚಳಿಬಿಸಿಲುಮಳೆಗಾಳಿಯಿಂದರ
ಘಳಿಗೆ ಬಿಡದಲೆ ಕಾವನೆಂದರಿ
ದಿಳೆಯೊಳಚಿಸುತಿರು ಸದಾ ಸವಾಂತರಾತ್ಮಕನ ೨೯

www.yousigma.com